**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 621 (623) |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಇತ್ತೀಚೆಗೆ ಪ್ರಕಟವಾದ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಶೇ. 60ಕ್ಕೂ ಕಡಿಮೆಯಾದರೆ ಅಂತಹ ಶಾಲಾ ಶಿಕ್ಷಕರುಗಳಿಗೆ ಮುಂಬಡ್ತಿ ನೀಡುವುದಿಲ್ಲ ಎಂದು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿರುವುದು ನಿಜವೇ; ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ; (ಸ್ಪಷ್ಟವಾಗಿ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಶೇ. 60ಕ್ಕೂ ಕಡಿಮೆಯಾದರೆ ಅಂತಹ ಶಾಲಾ ಶಿಕ್ಷಕರುಗಳಿಗೆ ಮುಂಬಡ್ತಿ ನೀಡುವುದಿಲ್ಲ ಎಂದು ಶಿಕ್ಷಣ ಇಲಾಖೆಯಿಂದ ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲ. |
| ಆ | ರಾಜ್ಯದಲ್ಲಿ ಕಡಿಮೆ ಫಲಿತಾಂಶ ಪ್ರಕಟವಾಗಲು ಸರ್ಕಾರದ ಹಲವಾರು ನಿಯಮಗಳು ಕಾರಣವಲ್ಲವೇ; | 2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಸುತ್ತೋಲೆ ಸಂಖ್ಯೆ:EP 272 SLB 2024 ದಿನಾಂಕ:29/08/2024 ರಲ್ಲಿ 20 ಅಂಶಗಳ ಸೂಚನೆಗಳನ್ನು ನೀಡಲಾಗಿದ್ದು, ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ. ಅದರಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆ ನಡೆಸಿರುತ್ತಾರೆ.<br><br>2024ರ ನವಂಬರ್ ಮಾಹೆಯಿಂದ ಮೇಲಿಂದ ಮೇಲೆ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರೊಂದಿಗೆ SSLC ಗುಣಮಟ್ಟದ ಫಲಿತಾಂಶಕ್ಕೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸಲಾಗಿರುತ್ತದೆ.<br><br>ಈ ಮೇಲಿನ ಅಂಶಗಳಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶವನ್ನು ಸುಧಾರಣೆಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಒಟ್ಟಾರೆ ಫಲಿತಾಂಶ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ಬಂದಿರುತ್ತದೆ.<br><br>**ಶಾಲೆಯ ವಿಧ** / **ಶೇಕಡವಾರು ಫಲಿತಾಂಶ**<br>ಸರ್ಕಾರಿ / 62.7%<br>ಖಾಸಗಿ ಅನುದಾನಿತ / 58.97%<br><br>**<u>2023-24ನೇ ಸಾಲಿನ ಹಾಗೂ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪ್ರಥಮ ಪರೀಕ್ಷೆಗಳ ತುಲನಾತ್ಮಕ ತಖ್ತೆ:</u>**<br><br>2023-2024 ನೇ ಸಾಲಿನಲ್ಲಿ ಪ್ರಪ್ರಥಮ ಬಾರಿಗೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿಗಳ ಮೂಲಕ ವೆಬ್ ಕ್ಯಾಸ್ಟಿಂಗ್ ಮಾಡುವ ಹೊಸ ಪದ್ಧತಿಯನ್ನು ಪರಿಚಯಿಸಲಾಗಿತ್ತು. ಪರೀಕ್ಷಾ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿತ್ತು. ಈ ನಾವೀನ್ಯ ಕ್ರಮವು ವಿನೂತನವಾಗಿದ್ದು, ಪರೀಕ್ಷೆಯ ಸಮಗ್ರತೆಯನ್ನು ಪುನರ್‌ಸ್ಥಾಪಿಸಲು ಸಹಾಯಕವಾಗಿದೆ. ಈ ಮೂಲಕ ಪರೀಕ್ಷಾ ಅಕ್ರಮಗಳನ್ನು ಆಶ್ರಯಿಸದೆ ಪರೀಕ್ಷೆಗಳನ್ನು ಬರೆಯುವ ಅಭ್ಯಾಸವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಸಫಲವಾಗಿದ್ದು, ಈ ಕ್ರಮವನ್ನು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರನ್ನೊಳಗೊಂಡಂತೆ ಎಲ್ಲಾ ಭಾಗೀದಾರರು ಸ್ವಾಗತಿಸಿದ್ದಾರೆ.<br><br>ಆದರೆ, ಒಟ್ಟಾರೆ ಫಲಿತಾಂಶ ಕಳೆದ ವರ್ಷಕ್ಕಿಂತ [2022-23] ಶೇ. 30 ರಷ್ಟು ಕಡಿಮೆಯಾಗಿತ್ತು. ಮೊದಲ ಬಾರಿಗೆ ವೆಬ್ ಕ್ಯಾಸ್ಟಿಂಗ್ |

ವಿಧಾನವನ್ನು ಪರಿಚಯಿಸಿದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 20% ಗ್ರೇಸ್ ಅಂಕಗಳನ್ನು ನೀಡಲು ಸರ್ಕಾರ ನಿರ್ಧರಿಸಿತ್ತು ಹಾಗೂ ಮುಂಬರುವ ವರ್ಷದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ನೂತನ ವ್ಯವಸ್ಥೆಗೆ ಉತ್ತಮವಾಗಿ ಹೊಂದಿಕೊಳ್ಳುವುದರಿಂದ ಕೃಪಾಂಕ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ನಿರ್ಧರಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಒಂದು ಬಾರಿಯ ಕ್ರಮವಾಗಿ, 2024ರ ಎಲ್ಲಾ 3 ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಎಲ್ಲಾ ವಿಷಯಗಳಲ್ಲಿ ನೀಡುವ ಕೃಪಾಂಕಗಳನ್ನು ಆಕರ್ಷಿಸಲು ಪಡೆಯಬೇಕಾದ ಅರ್ಹ ಅಂಕಗಳನ್ನು ಶೇ. 35 ರಿಂದ ಶೇ. 25ಕ್ಕೆ ಇಳಿಸಲಾಗಿದೆ ಮತ್ತು ಕೃಪಾಂಕದ ಪ್ರಮಾಣವನ್ನು ಶೇ.10 ರಿಂದ ಶೇ.20ಕ್ಕೆ ಹೆಚ್ಚಿಸಲಾಗಿತ್ತು. ಈ ಕ್ರಮದ ನಂತರ ಒಟ್ಟಾರೆ ಫಲಿತಾಂಶವು ಈ ಕೆಳಗಿನ ಕೋಷ್ಟಕದಂತಿರುತ್ತದೆ.

**2023-24 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ 20% ಗ್ರೇಸ್ ಅಂಕಗಳೊಡನೆ.**

| 2024 SSLC EXAM 1 RESULT STATISTICS (CCERF, 20% GRACE PASSED) | | | |
|---|---|---|---|
| GOVT | AIDED | UN-AIDED | TOTAL |
| 72.58 % | 72.34 % | 86.57 % | 77.03 % |

2023-24 ನೇ ಸಾಲಿನಲ್ಲಿಯೂ ಕೇವಲ ಶೇಕಡ 10% ಕೃಪಾಂಕದಂತೆ ಫಲಿತಾಂಶ ನೀಡಿದ್ದಲ್ಲಿ ಈ ಕೆಳಗಿನಂತೆ ಇರುತ್ತಿತ್ತು. ಇದನ್ನು 2024-25ನೇ ಸಾಲಿನ ಫಲಿತಾಂಶಕ್ಕೆ ಹೋಲಿಸಿದಲ್ಲಿ ಈ ಕೆಳಗಿನ ಹೆಚ್ಚಳವನ್ನು ಕಾಣಬಹುದು.

**2023-24 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ (10 % ಗ್ರೇಸ್ ಅಂಕಗಳಂತೆ)**

| 2024 SSLC EXAM 1 RESULT STATISTICS (CCERF, 10% GRACE PASSED) | | | | |
|---|---|---|---|---|
| YEAR | GOVT | AIDED | UN-AIDED | TOTAL |
| 2023-24 | 53.3 % | 52.67 % | 72.9 % | 59.45 % |

2024-25 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ (ಪ್ರತಿ ವರ್ಷ ನೀಡಲಾದ 10% ಗ್ರೇಸ್ ಅಂಕಗಳಂತೆ)

| SSLC 2025 EXAM 1 SCHOOL MANAGEMENT TYPE WISE RESULT [REGULAR FRESHER] | | | | |
|---|---|---|---|---|
| YEAR | GOVT | AIDED | UNAIDED | ALL |
| 2024-25 | 62.7 % | 58.97 % | 75.59 % | 66.14 % |

2023-24 (10% ಗ್ರೇಸ್) ಮತ್ತು 2024-25 ನೇ ಸಾಲಿನ (10% ಗ್ರಸ್) ಫಲಿತಾಂಶದಲ್ಲಿ ವ್ಯತ್ಯಾಸ

| SSLC 2024 & 2025 EXAM 1 SCHOOL MANAGEMENT TYPE WISE RESULT DIFFERENCE [REGULAR FRESHER, 10% grace] | | | | |
|---|---|---|---|---|
| YEAR | GOVT | AIDED | UN-AIDED | TOTAL |
| 2023-24 | 53.30% | 52.67% | 72.90% | 59.45% |
| 2024-25 | 62.70% | 58.97% | 75.59% | 66.14% |
| **DIFFERENCE** | **9.4** | **6.3** | **2.69** | **6.69** |

| | | |
|---|---|---|
| | | ಈ ಮೇಲಿನಂತೆ 2023-24 ನೇ ಸಾಲಿನ ಪರೀಕ್ಷೆ-1 (10% ಗ್ರೇಸ್) ಗಿಂತ 2024-25 ನೇ ಸಾಲಿನ ಪರೀಕ್ಷೆ-1 (10% ಗ್ರೆಸ್) ಫಲಿತಾಂಶದಲ್ಲಿ ಒಟ್ಟಾರೆ 6.69 % ಹೆಚ್ಚಳ ಆಗಿರುವುದು ಕಂಡು ಬರುತ್ತಿದೆ. |
| ಇ | ಈಗಾಗಲೇ ಎಷ್ಟು ಪ್ರೌಢಶಾಲಾ ಶಿಕ್ಷಕರುಗಳ ಮುಂಬಡ್ತಿಯನ್ನು ತಡೆಹಿಡಿಯಾಗಿದೆ: [ಜಿಲ್ಲಾವಾರು ಮಾಹಿತಿ ನೀಡುವುದು] | ಯಾವುದೇ ಶಿಕ್ಷಕರುಗಳ ಮುಂಬಡ್ತಿಯನ್ನು ತಡೆಹಿಡಿದಿರುವುದಿಲ್ಲ. |
| ಈ | ಮುಂಬಡ್ತಿ ಹಾಗೂ ಅನುದಾನದ ಸಂಬಂಧ ಹೊರಡಿಸಿದ ಸುತ್ತೋಲೆಯನ್ನು ಸರ್ಕಾರವು ಹಿಂತೆಗೆದುಕೊಳ್ಳುವುದೇ: ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಹಿಂತೆಗೆದುಕೊಳ್ಳವಾಗುವುದು. [ವಿವರ ನೀಡುವುದು] | ಶಾಲಾ ಶಿಕ್ಷಕರುಗಳಿಗೆ ಮುಂಬಡ್ತಿ ನೀಡುವುದಿಲ್ಲ ಎಂದು ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲ. ಸರ್ಕಾರ ಆದೇಶ ಸಂಖ್ಯೆ:ಇಡಿ 14 ಎಸ್ಇಪಿ 2017 ದಿನಾಂಕ:06/03/2019 ಆದೇಶದಂತೆ ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶೇ.60% ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರಿಗೆ ವಾರ್ಷಿಕ ವೇತನ ಬಡ್ತಿ ಹಾಗೂ ಅನುದಾನ ಹಿಂಪಡೆಯಲು 30.05.2025ರಲ್ಲಿ ಜ್ಞಾಪನಾ ಹೊರಡಿಸಿದ್ದು, ನಂತರ 05.06.2025 ರಲ್ಲಿ ವಿವರಣೆಯನ್ನು ಮಾತ್ರ ಕ್ರೋಢೀಕರಿಸಿ ಸಲ್ಲಿಸುವಂತೆ ನಂತರ ನೀಡುವ ಸೂಚನೆಯಂತೆ ಕ್ರಮವಹಿಸಲು ತಿಳಿಸಲಾಗಿರುತ್ತದೆ ಹಾಗೂ ಜನಪ್ರತಿನಿಧಿಗಳಿಂದ ಸಂಘ ಸಂಸ್ಥೆಗಳಿಂದ ಸದರಿ ಆದೇಶವನ್ನು ಹಿಂಪಡೆಯಲು ಕೋರಿದ್ದು, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ**: ಇಪಿ 294 ಎಸ್ಎಲ್ಬಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.